



## ಅಭಿವೃದ್ಧಿ ಹಂತದಲ್ಲೇ ಕ್ರಾಶ್ ಟೆಸ್ಟ್

ಜಗತ್ತಿನ ಹಲವು ಕಂಪನಿಗಳು ಕಾರುಗಳ ಅಭಿವೃದ್ಧಿ ಹಂತದಲ್ಲೇ ಕ್ರಾಶ್ ಟೆಸ್ಟ್ ನಡೆಸುತ್ತವೆ. ಅಭಿವೃದ್ಧಿಯ ಹಂತದಲ್ಲೇ ಕಾರುಗಳನ್ನು ಸುರಕ್ಷಿತವಾಗಿಸುವ ಉದ್ದೇಶದಿಂದ ಇಂತಹ ಪರೀಕ್ಷೆ ನಡೆಸಲಾಗುತ್ತದೆ.

ವೋಲ್ವೊ ಕಾರ್ಸ್ ಕಂಪನಿಯ ಕಾರುಗಳು ಜಗತ್ತಿನಲ್ಲೇ ಅತ್ಯಂತ ಸುರಕ್ಷಿತ ಕಾರುಗಳು ಎನಿಸಿವೆ. ಈ ಕಂಪನಿಯು ಅಭಿವೃದ್ಧಿಯ ಹಂತದಲ್ಲೇ ಕಾರುಗಳನ್ನು ಕ್ರಾಶ್ ಟೆಸ್ಟ್‌ಗೆ ಒಳಪಡಿಸುತ್ತದೆ. ಕಾರು ಸುರಕ್ಷಿತ ಎನಿಸಲಿಲ್ಲ ಎಂದರೆ, ಅದನ್ನು ಮರುವಿನ್ಯಾಸ ಮಾಡಲಾಗುತ್ತದೆ. ಆ ಮೂಲಕ ಅದು ಹೆಚ್ಚು ಸುರಕ್ಷಿತವಾಗಿ ಇರುವಂತೆ ಅಭಿವೃದ್ಧಿಪಡಿಸಲಾಗುತ್ತದೆ.

ಅಭಿವೃದ್ಧಿಯ ಹಂತದಲ್ಲೇ ಈ ಸ್ವರೂಪದ ಕ್ರಾಶ್ ಟೆಸ್ಟ್ ನಡೆಸುವ ಭಾರತದ ಕಂಪನಿಗಳಲ್ಲಿ 'ಟಾಟಾ ಮೋಟರ್ಸ್' ಮೊದಲ ಸಾಲಿನಲ್ಲಿ ನಿಲ್ಲುತ್ತದೆ. ಕಂಪನಿಯು ತನ್ನ ಡಿಸೈನ್ ಸ್ಟುಡಿಯೊದಲ್ಲಿ ಕ್ರಾಶ್ ಟೆಸ್ಟ್ ಪ್ರಯೋಗಾಲಯವನ್ನು ಆರಂಭಿಸಿ ಹತ್ತಕ್ಕೂ ಹೆಚ್ಚು ವರ್ಷಗಳು ಕಳೆದಿವೆ. ಹೀಗಾಗಿ ಈ ಕಂಪನಿಯ ಇಂಡಿಕಾ ಸರಣಿಯ ವಿಸ್ತಾ, ಝೆಸ್ಟ್, ಬೋಲ್ಟ್, ಆರಿಯಾ ಕಾರುಗಳೂ 'ಏಷಿಯಾನ್ ಎನ್‌ಸಿಎಪಿ'ಯಲ್ಲಿ, ಗ್ಲೋಬಲ್ ಎನ್‌ಸಿಎಪಿಯಲ್ಲಿ 3 ಮತ್ತು 4 ಸ್ಟಾರ್‌ಗಳ ರೇಟಿಂಗ್ ಪಡೆದಿದ್ದವು. ಈಗ ಉತ್ತಮ ರೇಟಿಂಗ್ ಹೊಂದಿರುವ ಅತಿಹೆಚ್ಚು ಕಾರುಗಳನ್ನು ತಯಾರಿಸುವ ಭಾರತದ ಮೊದಲ ಕಂಪನಿ ಎಂಬ ಶ್ರೇಯಕ್ಕೆ ಟಾಟಾ ಮೋಟರ್ಸ್ ಪಾತ್ರವಾಗಿದೆ.

ಈಚಿನ ವರ್ಷಗಳಲ್ಲಿ ಮಹೀಂದ್ರಾ ಅಂಡ್ ಮಹೀಂದ್ರಾ ಸಹ ಈ ಹಾದಿಯನ್ನೇ ತುಳಿದಿದೆ. ಮಾರುತಿ ಸುಜುಕಿ ಕೂಡ ತನ್ನದೇ ಕ್ರಾಶ್ ಟೆಸ್ಟ್ ಪ್ರಯೋಗಾಲಯವನ್ನು ಆರಂಭಿಸಿದೆ.

'ಎನ್‌ಸಿಎಪಿ' ನಿಯಮಗಳನ್ನು ಅಳವಡಿಸಬೇಕು ಎಂದು 'ಗ್ಲೋಬಲ್ ಎನ್‌ಸಿಎಪಿ' ತಂಡವು ನಿರ್ಧರಿಸಿತು. ಇದಕ್ಕಾಗಿ, 'ಭಾರತಕ್ಕಾಗಿ ಸುರಕ್ಷಿತ ಕಾರ್‌ಗಳು' ಎಂಬ ಕಾರ್ಯಕ್ರಮವನ್ನು ಆರಂಭಿಸಿತು. ಭಾರತದಲ್ಲಿ ಅತಿಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾಗುವ ಮತ್ತು ಅತಿ ಜನಪ್ರಿಯ ಕಾರುಗಳನ್ನು ಮಾರುಕಟ್ಟೆಯಿಂದ ಖರೀದಿಸಿ, ಕ್ರಾಶ್‌ಟೆಸ್ಟ್‌ಗೆ ಒಳಪಡಿಸಲಾಯಿತು. ಈಗಾಗಲೇ ಹತ್ತಾರು ಲಕ್ಷಗಳ ಸಂಖ್ಯೆಯಲ್ಲಿ ಮಾರಾಟವಾಗಿದ್ದ ಈ ಕಾರುಗಳು, ಕ್ರಾಶ್‌ಟೆಸ್ಟ್‌ನಲ್ಲಿ ಸಂಪೂರ್ಣ ನುಜ್ಜುಗುಜ್ಜಾದವು. ಈ ಎಲ್ಲಾ ಕಾರುಗಳು 0 ಸ್ಟಾರ್ ರೇಟಿಂಗ್ ಪಡೆದವು. 'ಗ್ಲೋಬಲ್ ಎನ್‌ಸಿಎಪಿ'ಯ ಈ ಕ್ರಾಶ್‌ಟೆಸ್ಟ್ ವರದಿಯನ್ನು ಭಾರತದ ಪ್ರಮುಖ ಮತ್ತು ನಂ.1 ಕಾರು ತಯಾರಕ ಕಂಪನಿ 'ಮಾರುತಿ ಸುಜುಕಿ' ತಿರಸ್ಕರಿಸಿತು. ಭಾರತದಲ್ಲಿ ಇರುವ ನಿಯಮಗಳಿಗೆ ಬದ್ಧವಾಗಿ ನಾವು ಕಾರು ತಯಾರಿಸಿದ್ದೇವೆ ಎಂದು ಕಂಪನಿ ಹೇಳಿತ್ತು. ಮೊದಲ ಕಂತಿನಲ್ಲಿ 'ಗ್ಲೋಬಲ್ ಎನ್‌ಸಿಎಪಿ' ನಡೆಸಿದ್ದ ಕ್ರಾಶ್ ಟೆಸ್ಟ್‌ನಲ್ಲಿ ಮಾರುತಿ ಕಂಪನಿಯ ಹಲವು ಕಾರುಗಳಿದ್ದವು. ಅವೆಲ್ಲವೂ, ಕ್ರಾಶ್ ಟೆಸ್ಟ್‌ನಲ್ಲಿ ಟಿನ್‌ಕ್ಯಾನ್‌ಗಳಂತೆ ಮುದುಡಿ ಹೋಗಿದ್ದವು. ಜನಪ್ರಿಯ ಎಸ್‌ಯುವಿಯಾಗಿದ್ದ ಮಹೀಂದ್ರಾ ಸ್ಕಾರ್ಪಿಯೋ ಸ್ಥಿತಿ ಸಹ ಇದಕ್ಕಿಂತ ಭಿನ್ನವಾಗಿರಲಿಲ್ಲ. ಆದರೆ, ಈ ವರದಿಗಳನ್ನು ಭಾರತೀಯ ಗ್ರಾಹಕರೂ ಪರಿಗಣಿಸಲಿಲ್ಲ. ಸರ್ಕಾರವೂ ಪರಿಗಣಿಸಲಿಲ್ಲ ಮತ್ತು ಕಾರು ತಯಾರಕ ಕಂಪನಿಗಳೂ ಪರಿಗಣಿಸಲಿಲ್ಲ.

'ಭಾರತಕ್ಕಾಗಿ ಸುರಕ್ಷಿತ ಕಾರುಗಳು' ಎಂಬ ತನ್ನ ಕಾರ್ಯಕ್ರಮದಿಂದ 'ಗ್ಲೋಬಲ್ ಎನ್‌ಸಿಎಪಿ' ಹಿಂದೆ ಸರಿಯಲಿಲ್ಲ. ಭಾರತದಲ್ಲಿ ಮಾರಾಟವಾಗುತ್ತಿದ್ದ ಮತ್ತಷ್ಟು ಕಾರುಗಳನ್ನು ಮಾರುಕಟ್ಟೆಯಿಂದ ಖರೀದಿಸಿ, ಕ್ರಾಶ್ ಟೆಸ್ಟ್‌ಗೆ ಒಳಪಡಿಸಿತು. ಫಲಿತಾಂಶ ಭಿನ್ನವಾಗೇನೂ ಇರಲಿಲ್ಲ. ಅದರ ಪರಿಣಾಮವೂ ಈ ಹಿಂದಿಗಿಂತ ಭಿನ್ನವಾಗೇನೂ ಇರಲಿಲ್ಲ. ಹೊರದೇಶಗಳಲ್ಲಿ ಮಾರಾಟವಾಗುತ್ತಿದ್ದ ಐರೋಪ್ಯ ಕಾರುಗಳು ಮತ್ತು ಕೊರಿಯಾ ಮತ್ತು ಜಪಾನ್ ಕಾರುಗಳು ಹೆಚ್ಚಿನ ಸ್ಟಾರ್ ರೇಟಿಂಗ್ ಪಡೆಯುತ್ತಿದ್ದವು. ಆದರೆ, ಭಾರತದಲ್ಲಿ ಮಾರಾಟವಾಗುತ್ತಿದ್ದ ಅದೇ ಕಾರ್‌ಗಳ ಅವತರಣಿಕೆಗಳು 0 ಸ್ಟಾರ್ ರೇಟಿಂಗ್ ಪಡೆಯುತ್ತಿದ್ದವು. 'ಗ್ಲೋಬಲ್ ಎನ್‌ಸಿಎಪಿ' ಇದನ್ನು ಪದೇ ಪದೇ ದೊಡ್ಡ ದನಿಯಲ್ಲಿ ಹೇಳಿತು. ಅಷ್ಟರಲ್ಲಿ ಪರೀಕ್ಷೆಗೆ ಒಳಪಡಿಸಲಾಗಿದ್ದ ಟಾಟಾ ಮೋಟರ್ಸ್‌ನ ಝೆಸ್ಟ್ ಸಿ–ಸೆಡಾನ್ 4 ಸ್ಟಾರ್ ರೇಟಿಂಗ್ ಪಡೆಯಿತು. ಇದು ಭಾರತದಲ್ಲಿ ಸುರಕ್ಷಿತ ಕಾರ್ ಎಂಬ ಪರಿಕಲ್ಪನೆಯ ದಿಕ್ಕನ್ನು ಬದಲಿಸಿತು. ಟಾಟಾ ಮೋಟರ್ಸ್ ಆನಂತರದ ವರ್ಷಗಳಲ್ಲಿ ಅಭಿವೃದ್ಧಿಪಡಿಸಿದ ಕಾರುಗಳಲ್ಲಿ ಸುರಕ್ಷತೆಗೂ ಹೆಚ್ಚು ಆದ್ಯತೆ ನೀಡಿತು. 'ಗ್ಲೋಬಲ್ ಎನ್‌ಸಿಎಪಿ'ಗೆ ಸ್ವಯಂಪ್ರೇರಿತವಾಗಿ ತನ್ನ ಕಾರುಗಳನ್ನು ಪರೀಕ್ಷೆಗೆ ಕಳುಹಿಸಿತು. ಟಾಟಾ ಕಂಪನಿಯ ಕಾರುಗಳು 5 ಸ್ಟಾರ್ ರೇಟಿಂಗ್ ಪಡೆದವು. ಟಾಟಾ ಕಂಪನಿ ಕಾರು ಮಾರಾಟದಲ್ಲಿ ಇದನ್ನು ಒಂದು ಮಹತ್ವದ ಅಂಶವಾಗಿ ಜಾಹೀರಾತು ಮಾಡಿತು. ಮಹೀಂದ್ರಾ ಅಂಡ್ ಮಹೀಂದ್ರಾ ಕಂಪನಿ ಸಹ ಇದೇ ಹಾದಿ ತುಳಿಯಿತು.

ಭಾರತದಲ್ಲಿ ಅತಿಹೆಚ್ಚು ಜನಪ್ರಿಯತೆ ಪಡೆದಿರುವ